ಅಸಲು ದಾವಾ ನಂ.8/2023 ಡಿಡಬ್ಲೂ : 1

ದಿನಾಂಕಃ 03-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್ ಎಮ್ ಹೆಚ್ ವಕೀಲರಿಂದಃ ವಾದಿ ಪರವಾಗಿಃ**

ಏನೂ ಇಲ್ಲ .

**ಪಾಟೀ ಸವಾಲುಃ ವಾದಿಯರ ಪರವಾಗಿಃ ಶ್ರೀ ಬಿ ಡಿ ಎಸ್ ವಕೀಲರಿಂದ :**

3. ನನ್ನ ತಂದೆ ಹೆಸರು ನಾರಾಯಣ ಎಂದರೆ ಸರಿ . ಅವರು ಈಗ ಜೀವಿತವಾಗಿಲ್ಲ. ನಮ್ಮ ತಂದೆಗೆ ನಾವು ಒಟ್ಟೂ 4 ಜನ ಮಕ್ಕಳು . ಅನಂತ , ಕಮಲಾ ಮತ್ತು ಸೀತಾ ಹಾಗೂ ಗಣಪತಿ. ನಮ್ಮ ತಂದೆಯ ಅಣ್ಣನ ಹೆಸರು ಗೋವಿಂದ ಎಂದರೆ ಸರಿ . ಗೋವಿಂದರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ . ಗೋವಿಂದರವರು ನನ್ನ ತಮ್ಮ ಗಣಪತಿಯವರನ್ನು ದತ್ತು ತೆಗೆದುಕೊಂಡಿರುತ್ತಾರೆ ಎಂದರೆ ಸರಿ . ಗೋವಿಂದ ಹಾಗೂ ಅವರ ಹೆಂಡತಿ ಗೌರಿ ತೀರಿಕೊಂಡ ನಂತರ ವಾರಸಾ ನಾತೆಯಿಂದ ಅವರ ಆಸ್ತಿ ಗಣಪತಿಯವರಿಗೆ ಬಂದಿರುತ್ತದೆ ಎಂದರೆ ಸರಿ . ಈಗ ಗಣಪತಿ ಹಾಗೂ ಅನಂತು ಇಬ್ಬರು ಜೀವಿತವಾಗಿಲ್ಲ.

4. ಗಣಪತಿ ಹೆಂಡತಿ ಹೆಸರು ಗೀತಾ ಹಾಗೂ ಅವರ ಮಕ್ಕಳ ಹೆಸರು ಮಹಾಲಕ್ಷ್ಮೀ , ಮಾಲತಿ , ಮಾಲಿನಿ, ರಾಘವೇಂದ್ರ ಹಾಗೂ ವೀಣಾ ಎಂದರೆ ಸರಿ . ಅನಂತರವರ ಹೆಂಡತಿ ಹೆಸರು ಕಾಮಾಕ್ಷಿ ಎಂದರೆ ಸರಿ . ಅವರ ಮಕ್ಕಳ ಹೆಸರು ಕುಮಾರ , ಸಂಗೀತಾ , ರೇಖಾ, ಪುಷ್ಪಾ ಹಾಗೂ ಹರೀಶ ಎಂದರೆ ಸರಿ . ಅಘನಾಶಿನಿಯಲ್ಲಿ ನಮ್ಮ ಕುಟುಂಬಕ್ಕೆ ಒಟ್ಟೂ ಎಷ್ಟು ಆಸ್ತಿ ಇದೆ ಗೊತ್ತಿಲ್ಲ . ಅಘನಾಶಿಸಿನಿಯಲ್ಲಿ ಸರ್ವೆ ನಂ. 269 ರಲ್ಲಿ 2 ಗುಂಟೆ 8 ಆಣೆ , ಸರ್ವೆ ನಂ. 271/ಬ ರಲ್ಲಿ 2 ಗುಂಟೆ 6 ಆಣೆ ಆಸ್ತಿ ಇದೆ ಎಂದರೆ ಸಾಕ್ಷಿ ಅದು ಪಿತ್ರಾರ್ಜಿತ ಆಸ್ತಿ ಇನ್ನೂ ಪಾಲು ಆಗಿಲ್ಲ ಆದರೆ ಅವರವರೇ ಅವರ ಹೆಸರಿಗೆ ಮಾಡಿಕೊಂಡಿದ್ದಾರೆ

ಎಂದು ನುಡಿದಿರುತ್ತಾರೆ. ಗೋವಿಂದರವರ ಹಕ್ಕಿನ ಆಸ್ತಿ ಗಣಪತಿಯವರಿಗೆ ಹಾಗೂ ನಮ್ಮ ತಂದೆ ನಾರಾಯಣ ರವರ ಆಸ್ತಿ ಅನಂತು, ಸೀತಾ ಹಾಗೂ ನನಗೆ ಸೇರುತ್ತದೆ ಎಂದರೆ ಸರಿ . ನಾನು ಚಿಕ್ಕವಳಿದ್ದಾಗ ನನ್ನ ಅಜ್ಜ ಗಣಪರವರ ಒಂದು ಸ್ವಂತ ಮನೆ ಇತ್ತು ಎಂದರೆ ಸರಿ . ಆ ಮನೆಯಲ್ಲಿ ನನ್ನ ತಂದೆ ಹಾಗೂ ದೊಡ್ಡಪ್ಪ ಗೋವಿಂದ ಹಾಗೂ ನಾವು ಒಟ್ಟೂ ಕುಟುಂಬದಲ್ಲಿ ಇರುತ್ತಿದ್ದೆವು ಎಂದರೆ ಸರಿ . ಆ ಮನೆ ಯಾವಾಗ ಬಿದ್ದು ಹೋಗಿದೆ ಗೊತ್ತಿಲ್ಲ. ನನ್ನ ಮದುವೆಯ ನಂತರದಲ್ಲಿ ಸದರಿ ಮನೆ ಹಳೇಯದಾದ್ದರಿಂದ ಅದನ್ನು ಪೂರ್ತಿ ತೆಗೆದೆವು. ಆ ನಂತರ ಒಟ್ಟೂ ಜಾಗದಲ್ಲಿ ಗಣಪತಿಯವರು ಮನೆ ಕಟ್ಟಿದರು ಎಂದರೆ ಸರಿ . ಕಾಮಾಕ್ಷಿ ಅನಂತನ ಹೆಂಡತಿ ಪಂಚಾಯತಿಯಿಂದ ಒಂದು ಮನೆ ಮಂಜೂರಾಯಿತು ಎಂದರೆ ಗೊತ್ತಿಲ್ಲ. ಆ ಮನೆ ಕೂಡ ಈ ಎರಡು ಜಾಗದಲ್ಲಿದೆ ಎಂದರೆ ಸರಿ . ಕಾಮಾಕ್ಷಿಯವರಿಗೆ ಪಂಚಾಯತಿಯಿಂದ ಮಂಜೂರಾಗಿರುವ ಮನೆ ನಂಬರ 69 ಎಂದರೆ ಸರಿ .

(ವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.